# ನಾನು ಕೇವಲ ದಲಿತ ಲೇಖಕನಲ್ಲ, ಭಾರತೀಯ ಬರಹಗಾರ

## ಮರಾಠಿ ಲೇಖಕ ಶರಣಕುಮಾರ ಲಿಂಬಾಳೆ ಅವರೊಂದಿಗೆ ಸಂವಾದ

**ಸಂದರ್ಶನ: ಚಂದ್ರಕಾಂತ ಪೋಕಳೆ**

ಶರಣಕುಮಾರ ಲಿಂಬಾಳೆಯವರು ಜಾಗತಿಕ ಖ್ಯಾತಿಯನ್ನು ಪಡೆದ ಮರಾಠಿ ಲೇಖಕ. ದಲಿತ, ಉಪೇಕ್ಷಿತ, ತಳ ಸಮುದಾಯದವರ ಸಂಘರ್ಷ ಅವರ ಬರಹಗಳ ವಸ್ತುಗಳಾಗಿವೆ. 1982ರಲ್ಲಿ ಪ್ರಕಟವಾದ 'ಉತ್ಪಾತ' ಎಂಬ ಕವಿತಾ ಸಂಗ್ರಹದಿಂದ ಅವರ ಸಾಹಿತ್ಯ ಯಾತ್ರೆ ಶುರುವಾಯಿತು. 1984ರಲ್ಲಿ ಪ್ರಕಟಗೊಂಡ, ಬಹುಚರ್ಚಿತವಾದ ಅವರ ಆತ್ಮಕತೆ 'ಅಕ್ಕರ ಮಾಶಿ' (ಕನ್ನಡದಲ್ಲಿ 'ಅಕ್ರಮ ಸಂತಾನ', ಅನು: ದು.ನಿಂ. ಬೆಳಗಲಿ) ಭಾರತೀಯ ಭಾಷೆಗಳಿಗೆ ಭಾಷಾಂತರಗೊಂಡು ಸಾಕಷ್ಟು ಖ್ಯಾತಿಯನ್ನು ತಂದುಕೊಟ್ಟಿತು. ದಲಿತ ಸಾಹಿತ್ಯ ಮತ್ತು ಚಳವಳಿಯ ಧಗಧಗಿಸುವ, ಕೆಚ್ಚೆದೆಯ 'ಆಕ್ಟಿವಿಸ್ಟ್'ನೆಂದು ಮತ್ತು ಬಹುಶ್ರುತ ಲೇಖಕನೆಂದು ಅವರು ಸದಾಕಾಲ ಚರ್ಚೆಯಲ್ಲಿದ್ದಾರೆ. ಅವರ 'ಬಾರಾಮಾಶಿ', 'ಹರಿಜನ', 'ದಲಿತ ಬ್ರಾಹ್ಮಣ' ಎಂಬ ಕಥಾಸಂಕಲನಗಳು, 'ಉಪಲ್ಯಾ', 'ಬಹುಜನ', 'ಸನಾತನ', 'ರಾಮರಾಜ್ಯ', 'ಹಿಂದೂ' ಎಂಬ ಕಾದಂಬರಿಗಳು ಗಮನ ಸೆಳೆದಿವೆ. ಹಲವು ದೇಶ–ವಿದೇಶಗಳ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮರಾಠಿ ವೈಚಾರಿಕ ಸಾಹಿತ್ಯವನ್ನು ಸಂಪಾದಿಸಿದ್ದಾರೆ. ಆಕ್ರಮಕ ಹಾಗೂ ವಿವಾದಗ್ರಸ್ತ ನಿಲುವುಗಳಿಂದಾಗಿ ಲಿಂಬಾಳೆ ಸದಾ ಸುದ್ದಿಯಲ್ಲಿರುತ್ತಾರೆ. ಅವರ ಬರಹಗಳು ದೇಶ–ವಿದೇಶಗಳ ಭಾಷೆಗಳಿಗೆ ಅನುವಾದಗೊಂಡಿವೆ. ಸಂಶೋಧನ ಕ್ಷೇತ್ರದಲ್ಲೂ ಅಪಾರ ಕೆಲಸಮಾಡಿದ್ದಾರೆ. ಕೆನಡಾ, ಆಸ್ಟ್ರೇಲಿಯಾ, ಅಮೆರಿಕದಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ನಾಸಿಕ್‌ನ ಯಶವಂತರಾವ್ ಚವ್ಹಾಣ ಮುಕ್ತ ವಿಶ್ವವಿದ್ಯಾಲಯದ ಸಂಚಾಲಕರಾಗಿ ಕಾರ್ಯನಿರ್ವಹಿಸಿ, ನಿವೃತ್ತರಾಗಿದ್ದಾರೆ.

ಅವರ 'ಸನಾತನ' ಎಂಬ ಕಾದಂಬರಿ 2018ರಲ್ಲಿ ಪ್ರಕಟಗೊಂಡಿತು. ಈಗ ಈ ಕಾದಂಬರಿಗೆ ಹದಿನೈದು ಲಕ್ಷ ರೂಪಾಯಿ ಮೊತ್ತದ 'ಸರಸ್ವತಿ ಸಮ್ಮಾನ' ಪ್ರಶಸ್ತಿ ಲಭಿಸಿದೆ. ಈ ಪ್ರಶಸ್ತಿಯ ನೆಪದಲ್ಲಿ ಮಾಡಲಾದ ವಿಶೇಷ ಸಂದರ್ಶನ ಇಲ್ಲಿದೆ.